ಪ್ರತಿ ಕುಟುಂಬಕ್ಕೂ ಕನಿಷ್ಟ ಒಬ್ಬರಿಗೆ ಉದ್ಯೋಗ ಒದಗಿಸುವ ಬಗ್ಗೆ

೩೪ (೮೮) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಆಡಳಿತ ಪಕ್ಷ ಕಳೆದ ಚುನಾವಣೆ ಸಂದರ್ಭದಲ್ಲಿ ಪ್ರತಿ ಕುಟುಂಬಕ್ಕೂ ಕನಿಷ್ಟ ಪಕ್ಷ ಒಬ್ಬರಿಗೆ ಉದ್ಯೋಗ ಒದಗಿಸುವ ಭರವಸೆ ನೀಡಿದ್ದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಸದರಿ ಭರವಸೆಯನ್ನು ಸರಕಾರದವರು ಜಾರಿಗೊಳಿಸಿರುವರೆ ?

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮದ ಮೇರೆಗೆ ಈಗಾಗಲೇ ಎಷ್ಟು ಮಂದಿಗೆ ಉದ್ಯೋಗ ಒದಗಿಸಲಾಗಿದೆ ?

ಈ) ಈ ಬಗ್ಗೆ ಸಮೀಕ್ಷೆಯನ್ನೇನಾದರೂ ನಡೆಸಲಾಗಿದೆಯೇ ?

ಉ) ವಿವಿಧ ಇಲಾಖೆಗಳಲ್ಲಿ ಐವತ್ತು ಸಾವಿರಕ್ಕೂ ಮೇಲ್ಪಟ್ಟು ಹುದ್ದೆಗಳು ಖಾಲಿ ಇರುವುದು ನಿಜವಲ್ಲವೇ ?

ಊ) ಹಾಗಿದ್ದಲ್ಲಿ, ಸದರಿ ಹುದ್ದೆಗಳನ್ನು ಭರ್ತಿ ಮಾಡುವಾಗ ಮೇಲ್ಕಂಡ ಭರವಸೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ನಿಜ.

ಆ) ಜಾರಿಗೊಳಿಸಲಾಗುತ್ತಿದೆ.

ಇ) ೧೯೮೫–೮೬ರಲ್ಲಿ ಒಟ್ಟು ಸುಮಾರು ೨,೩೧,೦೦೦ ರೆಗ್ಯುಲರ್ ಉದ್ಯೋಗವನ್ನು ಮತ್ತು ೪೮೭.೨೧ ಲಕ್ಷ ದುಡಿಮೆ ದಿನಗಳ ದಿನಗೂಲಿ ಉದ್ಯೋಗವನ್ನು ಸೃಷ್ಟಿಸಲಾಯಿತು.

ಈ) ಅವಶ್ಯಕವಾದ ಸಮೀಕ್ಷೆ ಕೆಲವು ತಾಲ್ಲೂಕುಗಳಲ್ಲಿ ನಡೆದಿದೆ.

ಉ) ವರದಿಯಾಗಿರುವ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾರ್ಚ ೧೯೮೬ರಲ್ಲಿ ಖಾಲಿಯಿದ್ದ ಹುದ್ದೆಗಳ ಸಂಖ್ಯೆ ಸುಮಾರು ೪೭,೦೦೦.

ಊ) ಪ್ರತಿ ಕುಟುಂಬದಲ್ಲಿ ಕನಿಷ್ಟ ಒಬ್ಬರಿಗೆ ಉದ್ಯೋಗ ಒದಗಿಸುವ ವ್ಯವಸ್ಥೆಯಲ್ಲಿ ಸರ್ಕಾರದ ಇಲಾಖೆಗಳಲ್ಲಿನ ರಿಕ್ತ ಸ್ಥಾನಗಳಲ್ಲಿ ನೌಕರಿಯನ್ನು ಕೊಡಲು ಸಾಧ್ಯವಿಲ್ಲ. ಏಕೆಂದರೆ ಈ ಸ್ಥಾನಗಳನ್ನು ಭಾರತ ಸಂವಿಧಾನದ ಅನುಚ್ಛೇದ ೩೧೯ರ ಪರಂಪುಕದಡಿಯಲ್ಲಿ ಹೊರಡಿಸಲಾಗಿರುವ ವರ್ಗ ಮತ್ತು ನೇಮಕಾತಿಯ ನಿಯಮಗಳಿಗನುಸಾರವಾಗಿಯೇ ತುಂಬ ಬೇಕಾಗಿದೆ. ಈ ರಿಕ್ತ ಸ್ಥಾನಗಳನ್ನು ತುಂಬುವಾಗ ಸಮಾನ ಅವಕಾಶದ ನೀತಿಯನ್ನು ಪಾಲಿಸಬೇಕಾಗಿದೆ.

ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ನೇಮಕ

೩೫ (೭೧) ಶ್ರೀ ಜಿ. ಎಸ್. ಆಚಾರ್ (ಬ್ಯಂದೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ತಾಲ್ಲೂಕಿನ ಹಳ್ಳಿಹೊಳೆ, ವಂಡ್ಸೆ, ನಾಡ ಗಂಗೊಳ್ಳಿಯಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಬಹುಕಾಲದಿಂದ ಪ್ರತ್ಯೇಕ ವೈದ್ಯಾಧಿಕಾರಿಗಳು ಇಲ್ಲವಾಗಿದ್ದು ಸಾರ್ವಜನಿಕರಿಗೆ ತೊಂದರೆ ಎಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಖಾಲಿ ಇರುವ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಈಗಾಗಲೇ ಈ ಘಟಕಗಳಿಗೆ ವೈದ್ಯರುಗಳನ್ನು ತೈನಾತಿ ಮಾಡಲಾಗಿದೆ. ಆದರೆ ಅವರು ಗಳು ಇನ್ನೂ ಕೆಲಸಕ್ಕೆ ಹಾಜರಾಗಿವುದಿಲ್ಲ. ಆದುದರಿಂದ ಪಕ್ಕದ ಹಳ್ಳಿಯ ವೈದ್ಯರುಗಳನ್ನು ಈ ಘಟಕಗಳಿಗೆ ಪ್ರಭಾರ ಕಾರ್ಯನಿರ್ವಹಿಸಲು ನಿಯೋಜಿಸಲಾಗಿದೆ.

ಇ) –ಡಿಟೋ–

ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ

೩೬ (೧೨೩) (ಬಿ)—ಶ್ರೀ ರಾಜುಗೌಡ (ಹಾನೂರು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೫–೮೬ ಮತ್ತು ೧೯೮೬–೮೭ರಲ್ಲಿ ಇದುವರೆವಿಗೆ ಈ ರಾಜ್ಯದಲ್ಲಿ ಎಷ್ಟು ಜನ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ ?

ಆ) ಇದರ ಬಗ್ಗೆ ಎಷ್ಟು ಮೊಕದ್ದಮೆಗಳು ದಾಖಲಾಗಿವೆ, ಎಷ್ಟರಲ್ಲಿ ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು) —

ಅ)

೧೯೮೫–೮೬	೧೯೮೬–೮೭
೫೬	೨೭

ಆ)

ದಾಖಲಾದ ಪ್ರಕರಣಗಳು	ಶಿಕ್ಷೆಯಾದ ಪ್ರಕರಣಗಳು	ಪೂರ್ಣ ಮಾಹಿತಿ ಲಭ್ಯವಿಲ್ಲ
೫೬	೧	

ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡುಗಳ ವಿತರಣೆ ಸಮರ್ಪಕಗೊಳಿಸುವ ಬಗ್ಗೆ

೩೭ (೨೮೭) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಾನೂನು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ವಿತರಣೆಯಾಗಿರುವ ಹಸಿರು ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಗ್ರಾಮಾಂತರ (ಪ್ರದೇಶಗಳಲ್ಲಿ) ಬಡತನ ರೇಖೆಯ ಕೆಳಗೆ ಬದುಕುತ್ತಿರುವ ಸಾವಿರಾರು ಕೃಷಿಕಾರ್ಮಿಕರಿಗೆ ಹಸಿರು ಕಾರ್ಡುಗಳು ಸಿಗದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಲವಾರು ಅರ್ಹರಲ್ಲದ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಕೊಟ್ಟಿರುವುದು ಈ ಪರಿಸ್ಥಿತಿಗೆ ಕಾರಣವಾಗಿದೆಯೇ ?

ಉ) ಈ ಅಸಮರ್ಪಕ ವಿತರಣೆಯನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೩೦.೦೯ ಲಕ್ಷ.